ಮುಂದಿನ ಘಟನೆಗೆ ಸಾಕ್ಷಿಯಾಗಲು ಅಣಿಯಾದೆವು. ಒಮ್ಮೆಗೆ ಮಿಂಚಿನಂತೆ ದಾಳಿ ಮಾಡಿದ ಪಾರ್ವಾಲಿ ಹಾರಿ ಜಿಂಕೆಮರಿಯನ್ನು ಹಿಡಿದೇಬಿಟ್ಟಳು. ಮರಿಯ ಚೀತ್ಕಾರವೂ, ಹುಲಿಯ ಅರ್ಭಟವೂ ಕೇಳಿಸಿತು. ಒಣಗಿದ ಹುಲ್ಲು ಅಡ್ಡವಿದ್ದ ಕಾರಣ ಕ್ಯಾಮೆರಾ ಕಣ್ಣಿಗೆ ಚಿತ್ರಗಳು ಸ್ಪಷ್ಟವಾಗಿ ಸಿಗಲಿಲ್ಲ. ಹುಲಿ ಅಟ್ಟಿಸಿಕೊಂಡು ಬಂದಾಗ ಎದ್ದ ದೂಳು, ಕೆಲವೇ ಕ್ಷಣಗಳಲ್ಲಿ ಸ್ತಬ್ಧಗೊಂಡ ಜಿಂಕೆಯ ಮರಿಯ ಕೂಗು. ಜಿಂಕೆಯ ಕುಟುಂಬ ಹೆದರಿ ಓಡುತ್ತಿದ್ದ ಹಾಗೆ ಸುತ್ತಲ ಕಾಡಿನಿಂದ ಪ್ರಾಣಿ-ಪಕ್ಷಿಗಳ ಕಿರುಚಾಟ ಶುರುವಾಯಿತು. ಹುಲಿ ಬೇಟೆಯಾಡಿದಾಗ ಎಲ್ಲವೂ ಹೀಗೆ ಭೀತಿಯಿಂದ ಕಿರುಚಿಕೊಳ್ಳುತ್ತವೆ. ನಾವು ಆದಷ್ಟು ಹುಲಿಯ ಸಮೀಪ ಹೋಗಲು ಜೀಪನ್ನು ನದಿಯ ದಂಡೆ ಕಡೆಗೆ ಓಡಿಸಿದೆವು. ಉಸಿರು ಕಳಕೊಂಡ ಜಿಂಕೆ ಅಲ್ಲಾಡದೆ ಬಿದ್ದಿತು. ಪಾರ್ವಾಲಿ ತಾನು ಗೆದ್ದೆ ಎಂಬ ಹೆಮ್ಮೆಯಲ್ಲಿ ಬುಸುಬುಸು ಉಸಿರೆಳೆದು ಬಿಸಾಕುತ್ತಾ ಜಿಂಕೆ ಮೈ ಮೇಲೆ ತನ್ನ ಕಾಲು ಊರಿ ನಿಂತಿದ್ದಳು. ಜಿಂಕೆಯ ಕೊನೆಯ ಸೊಲ್ಲು ನಿಲ್ಲುತ್ತಲೇ ಬಾಯಲ್ಲಿ ಎತ್ತಿ ಹಿಡಿದು ನಿಧಾನಕ್ಕೆ ತನ್ನ ಮರಿಗಳಿರುವ ದಿಕ್ಕಿನೆಡೆಗೆ ನಡೆಯತೊಡಗಿದಳು.

ಪಾರ್ವಾಲಿ ಆಗಾಗ ನಿಂತು, ಜಿಂಕೆಯ ಕೆಳಗಿಟ್ಟು ಮತ್ತೆ ಕುತ್ತಿಗೆ ಕಚ್ಚಿ ಹಿಡಿದು, ರಸ್ತೆ ದಾಟಿ ಮುಂದಿನ ಪೊದೆಗಳ ಕಡೆಗೆ ಹೋಗುವ ತನಕ ನೋಡಿದೆವು. ಅನೇಕ ಜೀಪುಗಳ ಡ್ರೈವರ್‌ಗಳು ಪಾರ್ವಾಲಿ ಅಲ್ಲಿ ಮುಂದಿನ ರಸ್ತೆಯಿಂದ ಹೊರ ಬರುತ್ತಾಳೆಂದು ತಿಳಿದು ಮುಂದೆ ಹೋದರು. ಶಿಕಾರಿ ನಡೆದ ಸ್ಥಳವೀಗ ಮೌನವಾಗಿ, ನಾವು ಇಡೀ ರೋಚಕ ಘಟನೆಯನ್ನು ಮನಸ್ಸಿಗೆ ಇಳಿಸುತ್ತಾ ಮಾತಿಲ್ಲದೆ ನಿಂತಿದ್ದೆವು. ನಮ್ಮ ಡ್ರೈವರ್ ಮುಶೀರ್ ಇಲ್ಲೇ ಸ್ವಲ್ಪ ಹೊತ್ತು ಇರೋಣ ಎಲ್ಲೂ ಹೋಗುವುದು ಬೇಡ ಎಂದನು. ಅವನ ಪ್ಲಾನು ನಮಗರ್ಥವಾಗಲಿಲ್ಲ. 'ಹುಲಿ ಮುಂದೆ ಪಾಸ್ ಆಗಿದೆ. ಎಲ್ಲಾ ಅತ್ತ ಕಡೆಗೇ ಬೆನ್ನುಬಿದ್ದು ಹೋಗಿದ್ದಾರೆ! ಮತ್ತೆ ನಾವೇಕಿಲ್ಲಿ ವ್ಯರ್ಥ ನಿಲ್ಲುವುದು?' ಎಂದು ಸುದಿ ಮೆಲ್ಲಗೆ ಉಸಿರಿದ.



ನಾನು ನೋಡೋಣ ಇರು ಎಂದು ಕಣ್ಣಲ್ಲೇ ಸನ್ನೆ ಮಾಡಿದೆ. ನಮ್ಮ ಅದೃಷ್ಟ ದೊಡ್ಡದಾಗಿತ್ತು. ಪಾರ್ವಾಲಿ ಪೊದೆಯಲ್ಲಿ ಜಿಂಕೆಯನ್ನು ಅವಿತಿಟ್ಟು ಮತ್ತೆ ನಾವು ನಿಂತಿದ್ದ ಕಡೆಗೇ ನಡೆದು ಬಂದಳು. ಇವಳು ಬೇಟೆ ಮುಗಿಸಿ ಬರುವ ಹೊತ್ತಿಗೆ ಇವಳ ಮಕ್ಕಳು ಪೊದೆಯಿಂದ ಎದ್ದು ನದಿ ಕಡೆಗೆ ಹೋಗಿದ್ದವು. ಅವರನ್ನು ಊಟಕ್ಕೆ ಹಿಡಿದು ತರಲು ಪಾರ್ವಾಲಿ ದಿಟ್ಟ ಹೆಜ್ಜೆ ಹಾಕುತ್ತಾ ನಮ್ಮ ಕಡೆಗೇ ನೋಡುತ್ತಾ ತೀರಾ ಹತ್ತಿರಕ್ಕೆ ಬಂದಳು. ಕೇವಲ ಐದಾರು ಅಡಿ ದೂರದಿಂದ ಅವಳ ತೀಕ್ಷ್ಣ ಕಣ್ಣುಗಳ ನೋಡಿ ಫಿದಾ ಆಗಿ ಹೋದೆ. ಬೆಳಗಿನ ಅವಧಿ ಮುಗಿದ ಕಾರಣ ನಾವು ಕಾಡಿನಿಂದಾಚೆಗೆ ಹೋಗಬೇಕಿತ್ತು.

ಆಕೆ ಮಕ್ಕಳು ಹೇಳಿದ ಜಾಗದಲ್ಲಿ ಕೂರದೆ ಹೀಗೆ ತಪ್ಪಿಸಿಕೊಂಡು ಎಲ್ಲೋ ಹೋಗುವುದು ಸಾಮಾನ್ಯವಂತೆ. ಮೂರು ವರ್ಷ ವಯಸ್ಸಿನ ಈ ಮಕ್ಕಳು ತಾಯಿಯಷ್ಟೇ ಗಾತ್ರದಲ್ಲಿ ದೊಡ್ಡವರಾಗಿ ಕಾಣುತ್ತವೆ. ಪಾರ್ವಾಲಿ ಮಕ್ಕಳನ್ನು ಹುಡುಕಲು ಕೂಗುತ್ತಾ ನದಿ ಮರಳಿನ ಮೇಲೆ ಹೊರಟಳು. ಅವಳು ಮಕ್ಕಳನ್ನು ಕರೆತರುವ ದೃಶ್ಯ ನೋಡುವ ಆಸೆ ಇದ್ದರೂ ಸಾಧ್ಯವಾಗಲಿಲ್ಲ. ಮಧ್ಯಾಹ್ನ ಬೇಗ ಬರೋಣ ಎಂದು ಹೊರಟೆವು. ಮತ್ತೆ ತಿರುಗಿ ಅಲ್ಲಿಗೆ ಬಂದಾಗ ಜಿಂಕೆಯನ್ನು ತಿಂದು ಮುಗಿಸಿದ ಮರಿಗಳು ಅರ್ಭಟಿಸುತ್ತಾ ಪರಸ್ಪರ ತಮ್ಮಲ್ಲೇ ಮಾತುಕತೆ, ಜಗಳ ಮಾಡಿಕೊಳ್ಳುತ್ತಿದ್ದವು. ಅಷ್ಟರಲ್ಲಿ ಹುಲಿಗಳು ಉಳಿಸಿದ ಮಾಂಸದ ಚೂರುಗಳನ್ನು ಹೊಂಚಿ ತಿನ್ನಲು ಅಲ್ಲೊಂದು ಹಾಕ್ ಈಗಲ್ ಬಂದು ಕೊಂಬೆ ಮೇಲೆ ಕೂತಿತು. ಅದರ ಗಮನ ಹುಲಿಗಳು ಭೋಜನ ಮುಗಿಸಿ ಎದ್ದು ಹೋಗುವ ಸಮಯಕ್ಕಾಗಿ ಕಾಯುವುದಾಗಿತ್ತು. ಆದರೆ ಇದೇ ಸಮಯದಲ್ಲಿ ಹಾಕ್ ಈಗಲ್ ನೋಡಿದ ಕಾಡು ಕೋಳಿ ಹೆದರಿ ಗಲಾಟೆ ಶುರು ಮಾಡಿಕೊಂಡಿತು. ಕೋಳಿಗೆ ಹದ್ದು ತನ್ನನ್ನು ಹಿಡಿಯಲು ಬಂದಿದೆ ಎಂಬ ಜೀವದಾತಂಕ. ಆ ಹೊತ್ತಿನ ಕೋಳಿಯ ಗಲಭೆ, ಕಿರುಚಾಟ, ಗಾಬರಿ ನಮಗೆ ನಗು